# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ: 22-01-2021 ರಂದು ನಡೆದ ವಾರ್ಡ್ ಸಂಖ್ಯೆ: 114 ಅಗರಂ ವಾರ್ಡಿನ ವಾರ್ಡ್ ಸಮಿತಿ ಸಭೆಯ ನಡಾವಳಿಗಳು

ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಕಛೇರಿ ಆದೇಶದ ಸಂಖ್ಯೆ: ಐ12(5)ಪಿಆರ್/35/2020-21, ದಿನಾಂಕ: 21-09-2020 ರ ಆದೇಶದಂತೆ ಜನವರಿ-2021 ರ ಮಾಹೆಯ ಅಗರಂ ವಾರ್ಡಿನ ವಾರ್ಡ್ ಸಮಿತಿ ಸಭೆಯನ್ನು ದಿನಾಂಕ: 22-01-2021 ರಂದು ನೆಡಿಸಲಾಯಿತು.

### ಸಭೆಗೆ ಹಾಜರಿದ್ದವರ ವಿವರಗಳು

| ಕ್ರ.ಸಂ | ಹೆಸರು | ಪದನಾಮ |
|---|---|---|
| 1 | **ಸನ್ಮಾನ್ಯ ಶ್ರೀ. ಎನ್.ಎ. ಹ್ಯಾರೀಸ್ ರವರು** | **ಮಾನ್ಯ ಶಾಸಕರು, ಶಾಂತಿನಗರ ವಿಧಾನಸಭಾ ಕ್ಷೇತ್ರ** |
| 2 | ಶ್ರೀ. ಅವಿನಾಶ್ ಬಾಬು | ಅಧ್ಯಕ್ಷಕರು ಮತ್ತು ನೋಡಲ್ ಅಧಿಕಾರಿಗಳು |
| 3 | ಡಿ. ಮೂರ್ತಿ | ಕಾರ್ಯದರ್ಶಿಗಳು ಮತ್ತು ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ: 114 |
| 5 | ಅಪ್ಪುರಾಜ್ | ಸಹಾಯಕ ಕಾರ್ಯಪಾಲಕ ಅಭಿಯಂತರರು ಘನತ್ಯಾಜ್ಯ ನಿರ್ವಹಣೆ-ಶಾಂತಿನಗರ ವಿಭಾಗ |
| 6 | ಆರ್. ಜಗದೀಶ್ | ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿ.ಡಬ್ಲ್ಯು.ಎಸ್.ಎಸ್.ಬಿ. |
| 7 | ಕೆ. ನಾಗರಾಜ | ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿ.ಡಬ್ಲ್ಯು.ಎಸ್.ಎಸ್.ಬಿ. |
| 10 | ಮಂಜುನಾಥ | ಸಹಾಯಕ ಕಾರ್ಯಪಾಲಕ ಅಭಿಯಂತರರು ಇ-6, ಬೆಸ್ಕಾಂ |
| 11 | ಸಿ ನಂಜುಂಡಯ್ಯ | ಕಿರಿಯ ಅಭಿಯಂತರರು, ಬೋರ್‌ವೆಲ್ |
| 14 | ಎಲ್. ಸಗಯನಾಥನ್ | ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ಸಂಖ್ಯೆ: 114 |
| 19 | ಮಮತ. ಎಂ.ಹೆಚ್ | ಸಹಾಯಕ ಅಭಿಯಂತರರು, ಬಿ.ಡಬ್ಲ್ಯು.ಎಸ್.ಎಸ್.ಬಿ |
| 20 | ಪ್ರಭು ಬಿ ಸಿ | ಕೆಲಸ ಪರಿವೀಕ್ಷಕರು ವಾರ್ಡ್ ಸಂಖ್ಯೆ: 114 |
| 22 | ದೇವರಾಜು | ಅರಣ್ಯ ಇಲಾಖೆ (ಪೂರ್ವ) |
| 24 | ಮಂಜಪ್ಪ ಹೆಚ್. ಎಸ್. | ಸಹಾಯಕ ಅಭಿಯಂತರರು ಸ್ಟ್ರೀಟ್ ಲೈಟ್ ವಿಭಾಗ, ಬಿಬಿಎಂಪಿ |
| 26 | ಪದ್ಮರಾಜ್ ಖೋತ್ | ಸಹಾಯಕ ಅಭಿಯಂತರರು ಯೋಜನೆ-ಪೂರ್ವ |

| ವಾರ್ಡ್ ಸಮಿತಿ ಸಭೆಯಲ್ಲಿ ಹಾಜರಿದ್ದ ಸಮಿತಿ ಸದಸ್ಯರು ಮತ್ತು ಸಾರ್ವಜನಿಕರು | | |
|---|---|---|
| 1 | ರಾಧ | ವಾರ್ಡ್ ಸಮಿತಿ ಸದಸ್ಯರು |
| 2 | ಭವಾನಿ | ವಾರ್ಡ್ ಸಮಿತಿ ಸದಸ್ಯರು |
| 3 | ವಸಂತ | ವಾರ್ಡ್ ಸಮಿತಿ ಸದಸ್ಯರು |
| 4 | ಪುರುಷೋತ್ತಮ | ವಾರ್ಡ್ ಸಮಿತಿ ಸದಸ್ಯರು |
| 5 | ಸರವಣ | ವಾರ್ಡ್ ಸಮಿತಿ ಸದಸ್ಯರು |
| 6 | ನಂಧ ಪಿ.ಕೆ | ವಾರ್ಡ್ ಸಮಿತಿ ಸದಸ್ಯರು |
| 7 | ರಾಜಕುಟ್ಟಿ | ವಾರ್ಡ್ ಸಮಿತಿ ಸದಸ್ಯರು |
| 8 | ಗೀತ ಶ್ರೀನಿವಾಸ್ | ವಾರ್ಡ್ ಸಮಿತಿ ಸದಸ್ಯರು (ಜೀವನಕೇಂದ್ರ ಬಡಾವಣೆ ಅಸೋಸಿಯೇಷನ್) |

ದಿನಾಂಕ: 22-01-2021 ರಂದು ಪೂರ್ವಾಹ್ನ 11-00 ಗಂಟೆಗೆ ಸನ್ಮಾನ್ಯ ಶ್ರೀ. ಎನ್. ಎ. ಹ್ಯಾರೀಸ್, ಮಾನ್ಯ ಶಾಸಕರು ಶಾಂತಿನಗರ ವಿಧಾನ ಸಭಾ ಕ್ಷೇತ್ರ ರವರ ಉಪಸ್ಥಿತಿಯಲ್ಲಿ ವಾರ್ಡ್ ಸಂಖ್ಯೆ: 114 ಅಗರಂ ವಾರ್ಡಿನ ವಾರ್ಡ್ ಸಮಿತಿ ಸಭೆಯನ್ನು ಪ್ರಾರಂಭಿಸಲಾಯಿತು.

ಶ್ರೀ. ಡಿ. ಮೂರ್ತಿ, ಕಾರ್ಯದರ್ಶಿಗಳು ಮತ್ತು ವಾರ್ಡಿನ ಸಹಾಯಕ ಅಭಿಯಂತರರು ಸಭೆಗೆ ಆಗಮಿಸಿದ್ದ ಸನ್ಮಾನ್ಯ ಶಾಸಕರನ್ನು, ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳನ್ನು ಮತ್ತು ವಾರ್ಡ್ ಸಮಿತಿ ಸದಸ್ಯರುಗಳನ್ನು, ವಿವಿಧ ಇಲಾಖೆಗಳ ಅಧಿಕಾರಿಗಳನ್ನು ಹಾಗೂ ವಾರ್ಡಿನ ನಿವಾಸಿಗಳನ್ನು ಸಭೆಗೆ ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಿದರು.

ಸಭೆಯ ಪ್ರಾರಂಭದಲ್ಲಿ, ಕಾರ್ಯದಶಿಗಳು ಹಿಂದಿನ ಸಭೆಯ ನಡವಳಿಗಳನ್ನು ಓದಿದರು, ಮತ್ತು ಹಿಂದಿನ ಸಭೆಯಲ್ಲಿ ಸಾರ್ವಜನಿಕರು ತಿಳಿಸಿದ ಸಮಸ್ಯೆಗಳ ಬಗ್ಗೆ ಕೈಗೊಂಡಿರುವ ಕ್ರಮಗಳನ್ನು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳ ಸಭೆಗೆ ವಿವರಿಸಿದರು.

**ಇಂದು ನಡೆದ ಸಭೆಯಲ್ಲಿ ಪ್ರಮುಖವಾಗಿ ಕೆಳಕಂಡ ವಿಷಯಗಳನ್ನು ಚರ್ಚಿಸಲಾಯಿತು.**

1. **ಶ್ರೀ. ಮುನಿಕಾಟಪ್ಪ** ಮತ್ತು ಇತರರು ಸಲ್ಲಿಸಿ ಆಸ್ಟಿನ್‌ಟೌನ್ ಬಿ.ಡಿ.ಎ. ಕಾಂಪ್ಲೆಕ್ಸ್ ಪಾದಚಾರಿ ಮಾರ್ಗದಲ್ಲಿ ಅನುಮತಿ ಇಲ್ಲದೇ ತೆರೆದಿರುವ ಆಹಾರ ಪದಾರ್ಥ ಮಾರಾಟ ಮಾಡುವ ಅಂಗಡಿಯನ್ನು ಮುಚ್ಚಿಸಲು ಕೋರಿ ಮನವಿ.
2. **ಶ್ರೀ. ಪೀಟರ್ ಡಿಸೋಜ ರವರು ಸಲ್ಲಿಸಿರುವ ಮನವಿ:**
    a. ಗೌತಮಪುರ ಮತ್ತು ನಾಗಮ್ಮ ನಗರದಲ್ಲಿರುವ ಬಡವರಿಗೆ ಹಕ್ಕು ಪತ್ರ ವಿತರಣೆ ಮಾಡಲು ಕೋರಿರುತ್ತಾರೆ.
    b. 2ನೇ ಮುಖ್ಯರಸ್ತೆ, ಗೌತಮಪುರ ಪ್ರದೇಶದಲ್ಲಿ ಬ್ಲಾಕ್ ಆಗಿರುವ ಡ್ರೈನೇಜ್ ಸರಿಪಡಿಸಲು ಕೋರಿರುತ್ತಾರೆ. ಮತ್ತು ಛೇಂಬರ್ ನಿರ್ಮಿಸಲು ಕೋರಿರುತ್ತಾರೆ.
3. **ಅಗರಂ ವಾರ್ಡಿನ ನಿವಾಸಿಗಳಾದ ಆನಂದ್, ರಾಜಕುಟ್ಟಿ, ರಮೇಶ್, ವಸಂತ, ಜಗದೀಶ್, ಪೌಲ್, ಗಣೇಶ್ ಮತ್ತು ನಿತ್ಯ ರವರುಗಳು ಸಲ್ಲಿಸಿರುವ ಮನವಿ:**
    a. 1st Square Austintown Sanitary/sewage line needs to be built.
    b. 1st square play ground compound wall should be lowered.
    c. Raja Gopal Mudaliar road full damage of concrete road to be patched up.
    d. Water leakage in Old Race Course road.
    e. Request for new sanitary pipe line in 6th square Austintown.
    f. Tree root was removed, in that place levelling and concrete work to be made.
    g. New borewell request in 6th square.
    h. Individual water pipeline to install in 6th square.
    i. Need to install High Mast light near Corporation Maternity Home, Austintown.

j. Need to repair or replace High mast light near Austintown market.
k. Public toilet near Austintown bus stand need maintenance.
l. Manhole covers are broken need to be replace in Austintown area.
m. Sanitary pipeline to be changed near Austintown Gangman quarters area

**ವಾರ್ಡ್ ಸಮಿತಿ ಸಭೆಯ ನಡಾವಳಿಗಳು**

| ಕ್ರ. ಸಂ | ಚರ್ಚಿಸಿದ ವಿಷಯಗಳು | ಕೈಗೊಳ್ಳಬೇಕದ ಕ್ರಮ | ಕ್ರಮಕೈಗೊಳ್ಳಬೇಕಾದ ಅಧಿಕಾರಿಗಳ ವಿವರ |
|---|---|---|---|
| 1 | a. **ಶ್ರೀ. ಮುನಿಕಾಟಪ್ಪ** ಮತ್ತು ಇತರರು ಸಲ್ಲಿಸಿ ಆಸ್ಟಿನ್‌ಟೌನ್ ಬಿ.ಡಿ.ಎ. ಕಾಂಪ್ಲೆಕ್ಸ್ ಪಾದಚಾರಿ ಮಾರ್ಗದಲ್ಲಿ ಅನುಮತಿ ಇಲ್ಲದೇ ತೆರೆದಿರುವ ಆಹಾರ ಪದಾರ್ಥ ಮಾರಾಟ ಮಾಡುವ ಅಂಗಡಿಯನ್ನು ಮುಚ್ಚಿಸಲು ಕೋರಿರುತ್ತಾರೆ. | ನೋಡಲ್ ಅಧಿಕಾರಿಗಳು ವಾರ್ಡಿನ ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ಕೂಡಲೇ ಅನಧಿಕೃತವಾಗಿ ಪ್ರಾರಂಭಿಸಿರುವ ಅಂಗಡಿಯನ್ನು ತೆರವು ಮಾಡುವಂತೆ ಸೂಚಿಸಿದರು. | ಆರೋಗ್ಯ ವೈದ್ಯಾಧಿಕಾರಿಗಳು<br>ಶಾಂತಿನಗರ ವಲಯ<br>ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ<br>ಶ್ರೀ ಸಗಾಯರಾಜ್<br>ಹಿರಿಯ ಆರೋಗ್ಯ ಪರಿವೀಕ್ಷಕರು<br>ವಾರ್ಡ್ ಸಂಖ್ಯೆ: 114 |
| 2 | a. ಪೀಟರ್ ಡಿಸೋಜ ರವರು ಮನವಿಯನ್ನು ಸಲ್ಲಿಸಿ, ಗೌತಮಪುರ ಮತ್ತು ನಾಗಮ್ಮ ನಗರದಲ್ಲಿರುವ ಬಡವರಿಗೆ ಹಕ್ಕು ಪತ್ರ ವಿತರಣೆ ಮಾಡಲು ಕೋರಿರುತ್ತಾರೆ. | ನೋಡಲ್ ಅಧಿಕಾರಿಗಳು ಈ ಕುರಿತು ಕೂಡಲೇ ಅಗತ್ಯ ಕ್ರಮವಹಿಸುವಂತೆ ಸಹಾಯಕ ಕಂದಾಯ ಅಧಿಕಾರಿಗಳು, ದೊಮ್ಮಲೂರು ಉಪ ವಿಭಾಗ ರವರಿಗೆ ಸೂಚಿಸಿದರು. | ಸಹಾಯಕ ಕಂದಾಯ ಅಧಿಕಾರಿಗಳು<br>ದೊಮ್ಮಲೂರು ಉಪ ವಿಭಾಗ<br>ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ |
| | b. ಪೀಟರ್ ಡಿಸೋಜ ರವರು ಮನವಿಯನ್ನು ಸಲ್ಲಿಸಿ, 2ನೇ ಮುಖ್ಯರಸ್ತೆ, ಗೌತಮಪುರ ಪ್ರದೇಶದಲ್ಲಿ ಬ್ಲಾಕ್ ಆಗಿರುವ ಡ್ರೈನೇಜ್ ಸರಿಪಡಿಸಲು ಕೋರಿರುತ್ತಾರೆ. ಮತ್ತು ಛೇಂಬರ್ ನಿರ್ಮಿಸಲು ಕೋರಿರುತ್ತಾರೆ. | ನೋಡಲ್ ಅಧಿಕಾರಿಗಳು, ಬಿ.ಡಬ್ಲ್ಯು.ಎಸ್.ಎಸ್.ಬಿ. ಇಲಾಖೆಯ ಸಹಾಯಕ ಕಾರ್ಯಪಾಲಕ ಅಭಿಯಂತರರಾದ ಶ್ರೀ. ನಾಗರಾಜ್ ರವರಿಗೆ ಈ ಕುರಿತು ಅಗತ್ಯ ಕ್ರಮವಹಿಸುವಂತೆ ಸೂಚಿಸಿರುತ್ತಾರೆ. | ನಾಗರಾಜ್<br>ಸಹಾಯಕ ಕಾರ್ಯಪಾಲಕ<br>ಅಭಿಯಂತರರು, ಬಿ.ಡಬ್ಲ್ಯು.ಎಸ್.ಎಸ್.ಬಿ |
| **ಅಗರಂ ವಾರ್ಡಿನ ನಿವಾಸಿಗಳಾದ ಆನಂದ್, ರಾಜಕುಟ್ಟಿ, ರಮೇಶ್, ವಸಂತ, ಜಗದೀಶ್, ಪೌಲ್, ಗಣೇಶ್ ಮತ್ತು ನಿತ್ಯ ರವರುಗಳು ಸಲ್ಲಿಸಿರುವ ಮನವಿ:** | | | |
| 3 | a. 1st Square Austintown ಪ್ರದೇಶದಲ್ಲಿ ಹೊಸದಾಗಿ ಸ್ಯನಿಟರಿ ಪೈಪ್‌ಲೈನ್ ಹಾಕಲು ಕೋರಿರುತ್ತಾರೆ. | ನೋಡಲ್ ಅಧಿಕಾರಿಗಳು, ಬಿ.ಡಬ್ಲ್ಯು.ಎಸ್.ಎಸ್.ಬಿ. ಇಲಾಖೆಯ ಸಹಾಯಕ ಕಾರ್ಯಪಾಲಕ ಅಭಿಯಂತರರಾದ ಶ್ರೀ. ನಾಗರಾಜ್ ರವರಿಗೆ ಈ ಕುರಿತು ಅಗತ್ಯ ಕ್ರಮವಹಿಸುವಂತೆ ಸೂಚಿಸಿರುತ್ತಾರೆ. | ನಾಗರಾಜ್<br>ಸಹಾಯಕ ಕಾರ್ಯಪಾಲಕ<br>ಅಭಿಯಂತರರು, ಬಿ.ಡಬ್ಲ್ಯು.ಎಸ್.ಎಸ್.ಬಿ |
| | b. 1st square Austintown ಪ್ರದೇಶದಲ್ಲಿರುವ play ground compound wall ಎತ್ತರವನ್ನು ಕಡಿಮೆ ಮಾಡಬೇಕೆಂದು ಮನವಿ ಮಾಡಿರುತ್ತಾರೆ. | ಸಭೆಯಲ್ಲಿ ಹಾಜರಿದ್ದ ಪಾಲಿಕೆಯ ಪೂರ್ವ ವಲಯದ ಯೋಜನಾ ವಿಭಾಗದ ಸಹಾಯಕ ಅಭಿಯಂತರರಾದ ಶ್ರೀ ಪದ್ಮರಾಜ್ ರವರಿಗೆ ಈ ಕುರಿತು ಅಗತ್ಯ ಕ್ರಮವಹಿಸುವಂತೆ ನೋಡಲ್ ಅಧಿಕಾರಿಗಳು ಸೂಚಿಸದರು. | ಪದ್ಮರಾಜ್ ಖೋತ್<br>ಸಹಾಯಕ ಅಭಿಯಂತರರು<br>(ಯೋಜನೆ-ಪೂರ್ವ)<br>ಬಿ.ಬಿ.ಎಂ.ಪಿ<br>9590684949 |
| | c. Raja Gopal Mudaliar ರಸ್ತೆಯ ಕಾಂಕ್ರೀಟ್ ರಸ್ತೆಯು ಬಹಳಷ್ಟು ದುರಸ್ಥಿಗೊಂಡಿದ್ದು, ಈ ರಸ್ತೆಯನ್ನು ಕೂಡಲೇ ದುರಸ್ಥಿಗೊಳಿಸುವಂತೆ ಕೋರಿರುತ್ತಾರೆ. | ಈ ಬಗ್ಗೆ ನೋಡಲ್ ಅಧಿಕಾರಿಗಳು ಪಾಲಿಕೆಯ ಸಹಾಯಕ ಕಾರ್ಯಪಾಲಕ ಅಭಿಯಂತರರು, ದೊಮ್ಮಲೂರು ಉಪ ವಿಭಾಗ ರವರಿಗೆ ಕೂಡಲೇ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿದರು. | ಶ್ರೀ. ಟಿ. ಡಿ. ಮಂಜುನಾಥ<br>ಸಹಾಯಕ ಕಾರ್ಯಪಾಲಕ<br>ಅಭಿಯಂತರರು<br>ಬಿ.ಬಿ.ಎಂ.ಪಿ.<br>9845894584 |

| | | | |
|---|---|---|---|
| | d. Old Race Course ರಸ್ತೆಯಲ್ಲಿ ನೀರು ಲೀಕೇಜ್ ಆಗುತ್ತಿದ್ದು, ಈ ನೀರು ಡಾ॥ ಅಂಬೇಡ್ಕರ್ ಪ್ರತಿಮೆ ಹತ್ತಿರ ಸೀವೆಜ್ ನೀರಿನೊಂದಿಗೆ ಮಿಶ್ರಣಗೊಳ್ಳುತ್ತಿದ್ದು, ಇದರಿಂದ ಸಾರ್ವಜನಿಕರಿಗೆ ತೊಂದರೆಯುಂಟಾಗುತ್ತಿದ್ದು ಕೂಡಲೇ ಸಮಸ್ಯೆ ಪರಿಹರಿಸುವಂತೆ ಕೋರಿರುತ್ತಾರೆ.<br>e. 6th square Austintown ಪ್ರದೇಶದಲ್ಲಿ ಹೊಸದಾಗಿ ಸ್ಯಾನಿಟರಿ ಪೈಪ್‌ಲೈನ್ ಅಳವಡಿಸುವಂತೆ ಕೋರಿರುತ್ತಾರೆ. | ನೋಡಲ್ ಅಧಿಕಾರಿಗಳು, ಬಿ.ಡಬ್ಲ್ಯು.ಎಸ್.ಎಸ್.ಬಿ. ಇಲಾಖೆಯ ಸಹಾಯಕ ಕಾರ್ಯಪಾಲಕ ಅಭಿಯಂತರರಾದ ಶ್ರೀ. ನಾಗರಾಜ್ ರವರಿಗೆ ಈ ಕುರಿತು ಅಗತ್ಯ ಕ್ರಮವಹಿಸುವಂತೆ ಸೂಚಿಸಿರುತ್ತಾರೆ. | ನಾಗರಾಜ್<br>ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯು.ಎಸ್.ಎಸ್.ಬಿ |
| | f. ಆಸ್ಟಿನ್‌ಟೌನ್ ಪ್ರದೇಶದಲ್ಲಿದ್ದ ಹಳೆಯ ಮರದ ಬೇರನ್ನು ತೆರವು ಮಾಡಲಾಗಿರುತ್ತದೆ. ಈ ಸ್ಥಳವನ್ನು ಸಮತಟ್ಟು ಮಾಡಿ ಕಾಂಕ್ರೀಟ್ ಹಾಕಲು ಮನವಿ ಮಾಡಿರುತ್ತಾರೆ. | ವಾರ್ಡಿನ ಸಹಾಯಕ ಇಂಜಿನಿಯರ್ ರವರು ಅನುದಾನ ಲಭ್ಯತೆಯನ್ನು ಪರಿಶೀಲಿಸಿ ಕೂಡಲೇ ಕಾಮಗಾರಿ ನಿರ್ವಹಿಸಲಾಗುವುದು ಎಂದು ತಿಳಿಸಿದರು. | ಶ್ರೀ. ಟಿ. ಡಿ. ಮಂಜುನಾಥ<br>ಸಹಾಯಕ ಕಾರ್ಯಪಾಲಕ ಅಭಿಯಂತರರು<br>ಬಿ.ಬಿ.ಎಂ.ಪಿ.<br>9845894584 |
| | g. 6th square Austintown ಪ್ರದೇಶದಲ್ಲಿ ಹೊಸದಾಗಿ ಒಂದು ಬೋರ್‌ವೆಲ್ ಹಾಕಿಸಿ ನೀರು ಸರಬರಾಜು ಮಾಡಲು ಕೋರಿರುತ್ತಾರೆ. | ಈ ಬಗ್ಗೆ ನೋಡಲ್ ಅಧಿಕಾರಿಗಳು ಪಾಲಿಕೆಯ ಸಹಾಯಕ ಕಾರ್ಯಪಾಲಕ ಅಭಿಯಂತರರು, ದೊಮ್ಮಲೂರು ಉಪ ವಿಭಾಗ ರವರಿಗೆ ಕೂಡಲೇ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿದರು. | ಶ್ರೀ. ಟಿ. ಡಿ. ಮಂಜುನಾಥ<br>ಸಹಾಯಕ ಕಾರ್ಯಪಾಲಕ ಅಭಿಯಂತರರು<br>ಬಿ.ಬಿ.ಎಂ.ಪಿ.<br>9845894584 |
| | h. 6th square Austintown ಪ್ರದೇಶದ ಪ್ರತಿ ಮನೆಗೆ ಪ್ರತ್ಯೇಕ ನೀರಿನ ಪೈಪ್‌ಲೈನ್ ಅಳವಡಿಸಲು ಕೋರಿರುತ್ತಾರೆ. | ನೋಡಲ್ ಅಧಿಕಾರಿಗಳು, ಬಿ.ಡಬ್ಲ್ಯು.ಎಸ್.ಎಸ್.ಬಿ. ಇಲಾಖೆಯ ಸಹಾಯಕ ಕಾರ್ಯಪಾಲಕ ಅಭಿಯಂತರರಾದ ಶ್ರೀ. ನಾಗರಾಜ್ ರವರಿಗೆ ಈ ಕುರಿತು ಅಗತ್ಯ ಕ್ರಮವಹಿಸುವಂತೆ ಸೂಚಿಸಿರುತ್ತಾರೆ. | ನಾಗರಾಜ್<br>ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯು.ಎಸ್.ಎಸ್.ಬಿ |
| | i. ಆಸ್ಟಿನ್‌ಟೌನ್ ಹೆರಿಗೆ ಆಸ್ಪತ್ರೆ ಹತ್ತಿರ High Mast light ಅಳವಡಿಸುವಂತೆ ಕೋರಿರುತ್ತಾರೆ.<br>j. ಆಸ್ಟಿನ್‌ಟೌನ್ ಹೆರಿಗೆ ಮಾರ್ಕೆಟ್ ಹತ್ತಿರ ಇರುವ High Mast light ರಿಪೇರಿ ಮಾಡಲು ಅತವಾ ಹೊಸ ಲೈಟ್ ಅಳವಡಿಸಲು ಕೋರಿರುತ್ತಾರೆ. | ಈ ಬಗ್ಗೆ ಅಗತ್ಯ ಕ್ರಮವಹಿಸುವಂತೆ ಪಾಲಿಕೆಯ ಪೂರ್ವ ವಲಯದ ವಿದ್ಯುತ್ ವಿಭಾಗದ ಸಹಾಯಕ ಅಭಿಯಂತರರಿಗೆ ಅಗತ್ಯ ಕ್ರಮವಹಿಸುವಂತೆ ನೋಡಲ್ ಅಧಿಕಾರಿಗಳು ಸೂಚಿಸಿದರು. | ಶ್ರೀ. ಮಂಜಪ್ಪ<br>ಕಿರಿಯ ಅಭಿಯಂತರರು<br>ವಿದ್ಯುತ್ ವಿಭಾಗ, ಬಿ.ಬಿ.ಎಂ.ಪಿ. |
| | k. ಆಸ್ಟಿನ್‌ಟೌನ್ ಬಸ್ ಸ್ಟ್ಯಾಂಡ್ ಹತ್ತಿರ ಇರುವ ಸಾರ್ವಜನಿಕ ಶೌಚಾಲಯವು ತುಂಬ ದುಸ್ಥಿತಿಯಲ್ಲಿದ್ದು, ಇದರಿಂದ ಸಾರ್ವಜನಿಕರಿಗೆ ಬಹಳ ತೊಂದರೆ ಆಗುತ್ತಿರುತ್ತದೆ. ಆದ್ದರಿಂದ ಈ ಶೌಚಾಲಯವನ್ನು ಅಭಿವೃದ್ಧಿಪಡಿಸುವಂತೆ ಕೋರಿರುತ್ತಾರೆ. | ಈ ಬಗ್ಗೆ ನೋಡಲ್ ಅಧಿಕಾರಿಗಳು ಪಾಲಿಕೆಯ ಸಹಾಯಕ ಕಾರ್ಯಪಾಲಕ ಅಭಿಯಂತರರು, ದೊಮ್ಮಲೂರು ಉಪ ವಿಭಾಗ ರವರಿಗೆ ಕೂಡಲೇ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿದರು. | ಶ್ರೀ. ಟಿ. ಡಿ. ಮಂಜುನಾಥ<br>ಸಹಾಯಕ ಕಾರ್ಯಪಾಲಕ ಅಭಿಯಂತರರು<br>ಬಿ.ಬಿ.ಎಂ.ಪಿ.<br>9845894584 |
| | l. ಆಸ್ಟಿನ್‌ಟೌನ್ ಪ್ರದೇಶದಲ್ಲಿರುವ ಮ್ಯಾನ್‌ಹೋಲ್‌ಗಳ ಮೇಲೆ ಹಾಕಿರುವ ಸ್ಲ್ಯಾಬ್‌ಗಳು ಹಲವು ಕಡೆಗಳಲ್ಲಿ ದರುಸ್ಥಿಗೊಂಡಿದ್ದು, ಇವುಗಳನು ಕೂಡಲೇ ಬದಲಾಯಿಸುವಂತೆ ಕೋರಿರುತ್ತಾರೆ. | ನೋಡಲ್ ಅಧಿಕಾರಿಗಳು, ಬಿ.ಡಬ್ಲ್ಯು.ಎಸ್.ಎಸ್.ಬಿ. ಇಲಾಖೆಯ ಸಹಾಯಕ ಕಾರ್ಯಪಾಲಕ ಅಭಿಯಂತರರಾದ ಶ್ರೀ. ನಾಗರಾಜ್ | ನಾಗರಾಜ್<br>ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯು.ಎಸ್.ಎಸ್.ಬಿ |

| | | |
|---|---|---|
| ಣ. ಆಸ್ಟಿನ್‌ಟೌನ್ ಗ್ಯಾಂಗ್‌ಮ್ಯಾನ್ ಕ್ವಾರ್ಟರ್ಸ್ ಪ್ರದೇಶದಲ್ಲಿ ಅಳವಡಿಸಿರುವ ಸ್ಯಾನಿಟರಿ ಪೈಪ್‌ಲೈನ್ ತುಂಬಾ ಹಳೆಯದಾಗಿದ್ದು, ಅದನ್ನು ಬದಲಾಯಿಸುವಂತೆ ಕೋರಿರುತ್ತಾರೆ. | ರವರಿಗೆ ಈ ಕುರಿತು ಅಗತ್ಯ ಕ್ರಮವಹಿಸುವಂತೆ ಸೂಚಿಸಿರುತ್ತಾರೆ. | |

ಕೊನೆಯದಾಗಿ ಕಾರ್ಯದರ್ಶಿಯವರು ಮಾನ್ಯ ಶಾಸಕರಿಗೆ ಮತ್ತು ಸಭೆಗೆ ಹಾಜರಾಗಿದ್ದ ಅಧಿಕಾರಿಗಳಿಗೆ ಮತ್ತು ಸಮಿತಿಯ ಸದಸ್ಯರುಗಳಿಗೆ ಹಾಗೂ ಸಾರ್ವಜನಿಕರಿಗೆ ವಂದಿಸಿ ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳ ಅಪ್ಪಣೆಯ ಮೇರೆಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿ ಮತ್ತು ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ: 114 ಅಗರಂ
ಬಿ.ಬಿ.ಎಂ.ಪಿ

ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ: 114 ಅಗರಂ
ಬಿ.ಬಿ.ಎಂ.ಪಿ

ಪ್ರತಿಯನ್ನು:

1. ಮಾನ್ಯ ಆಡಳಿತಗಾರರು, ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
2. ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
3. ವಿಶೇಷ ಆಯುಕ್ತರು (ಆಡಳಿತ) ರವರ ಅವಗಾಹನೆಗೆ ಸಲ್ಲಿಸಿದೆ.
4. ವಲಯ ಆಯುಕ್ತರು (ಪೂರ್ವ) ರವರ ಅವಗಾಹನೆಗೆ ಸಲ್ಲಿಸಿದೆ.
5. ಮಾನ್ಯ ಮುಖ್ಯ ಅಭಿಯಂತರರು (ಪೂರ್ವ) ರವರ ಅವಗಾಹನೆಗಾಗಿ ಸಲ್ಲಿಸಿದೆ.
6. ವಾರ್ಡ್ ಸಮಿತಿಯ ಸದಸ್ಯರುಗಳ ಮಾಹಿತಿಗಾಗಿ ಕಳುಹಿಸಿದೆ.
7. ಸದರಿ ಸಭೆಯ ನಡಾವಳಿ ಪ್ರತಿಯನ್ನು ಸಭೆಗೆ ಹಾಜರಾಗಿದ್ದ ಎಲ್ಲಾ ಇಲಾಖೆಯ ಅಧಿಕಾರಿಗಳಿಗೆ ಕಳುಹಿಸಿಕೊಡುತ್ತಾ, ಸಭೆಯಲ್ಲಿ ಸಾರ್ವಜನಿಕರು ಮತ್ತು ವಾರ್ಡ್ ಸಮಿತಿ ಸದಸ್ಯರುಗಳು ಚರ್ಚಿಸಿದ ವಿಷಯದ ಬಗ್ಗೆ ಹಾಗೂ ಸಮಸ್ಯೆಗಳನ್ನು ಬಗೆಹರಿಸಲು ಕೈಗೊಂಡ ಕ್ರಮಗಳ ಸಂಪೂರ್ಣ ವಿವರವನ್ನು ಲಿಖಿತ ರೂಪದಲ್ಲಿ ಸದಸ್ಯ ಕಾರ್ಯದರ್ಶಿ ಮತ್ತು ಸಹಾಯಕ ಅಭಿಯಂತರರ ಕಛೇರಿಗೆ ಸಲ್ಲಿಸಲು ಈ ಮೂಲಕ ಎಲ್ಲಾ ಇಲಾಖೆಯ ಅಧಿಕಾರಿಗಳಲ್ಲಿ ಕೋರಿದೆ.
8. ಕಛೇರಿ ಪ್ರತಿ.